INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-8, Issue -02,March-April, 2026
Page No,56-66
Peer -Reviewed, Refereed Journal

# ಕೋಲಾರ ಜಿಲ್ಲೆಯ ಪೆಣ್ಬುಯಿಲ್ ಶಿಲ್ಪಗಳ ಕುರಿತ ವಿಮರ್ಶಾತ್ಮಕ ಅಧ್ಯಯನ

**ಶಂಕರಪ್ಪ.ಎನ್.**[1]

**ಸಾರಾಂಶ:** ಕೋಲಾರ ಜಿಲ್ಲೆಯ ಪೆಣ್ಬುಯಿಲ್ ಶಿಲ್ಪಗಳನ್ನು ಇತಿಹಾಸಾತ್ಮಕ, ಸಮಾಜೋ–ಸಾಂಸ್ಕೃತಿಕ ದೃಷ್ಟಿಕೋನಗಳಿಂದ ವಿಮರ್ಶಾತ್ಮಕವಾಗಿ ವಿಶ್ಲೇಷಿಸುವ ಮೂಲಕ ಪೆಣ್ಬುಯಿಲ್ ಎಂಬ ಪರಿಕಲ್ಪನೆಯು ಯುದ್ಧಕಾಲದಲ್ಲಿ ಮಹಿಳೆಯರ ಮೇಲೆ ನಡೆದ ದೌರ್ಜನ್ಯ, ಅವಮಾನ ಮತ್ತು ಲೈಂಗಿಕ ಹಿಂಸಾಚಾರದ ಸಂಕೇತವಾಗಿದೆ. ಈ ಶಿಲ್ಪಗಳು ಕೇವಲ ವೀರರ ಸಾಹಸಗಳನ್ನು ಕೊಂಡಾಡುವುದಲ್ಲದೆ, ಸಮಾಜದ ಪಿತೃತ್ವದ ಮನೋಭಾವ, ಲಿಂಗ ಸಂಬಂಧಗಳು ಮತ್ತು ಮೌಲ್ಯ ವ್ಯವಸ್ಥೆಯನ್ನು ಪ್ರತಿಬಿಂಬಿಸುತ್ತವೆ. ಕೋಲಾರ ಜಿಲ್ಲೆಯ ಪೆಣ್ಬುಯಿಲ್ ಶಿಲ್ಪಗಳು ಇತರೆ ಪ್ರದೇಶಗಳಿಗಿಂತಲೂ ವಿಭಿನ್ನವಾಗಿ ಮಹಿಳೆಯರ ಗೌರವವನ್ನು ಕಾಪಾಡುವ ಸಂವೇದನೆಯನ್ನು ತೋರಿಸುತ್ತವೆ. ಇವುಗಳಲ್ಲಿ ನಗ್ನತೆಯ ಪ್ರದರ್ಶನ ಕಾಣಿಸದಿರುವುದು ಸ್ಥಳೀಯ ಸಂಸ್ಕೃತಿ, ಧಾರ್ಮಿಕ ನಂಬಿಕೆಗಳು ಮತ್ತು ಮಹಿಳಾ ಪೂಜಾ ಪರಂಪರೆಯ ಪರಿಣಾಮವಾಗಿರಬಹುದು. ಪ್ರಸ್ತುತ ಅಧ್ಯಯನವು ಶಾಸನಾಧಾರಿತ ವಿಶ್ಲೇಷಣೆ, ಶಿಲ್ಪಶಾಸ್ತ್ರೀಯ ಅಧ್ಯಯನ ಮತ್ತು ತೂಲನಾ ವಿಧಾನಗಳ ಮೂಲಕ ಪೆಣ್ಬುಯಿಲ್ ಶಿಲ್ಪಗಳ ಅರ್ಥ ಮತ್ತು ಮಹತ್ವವನ್ನು ಅನಾವರಣಗೊಳಿಸುತ್ತದೆ. ಇದು ಪ್ರಾದೇಶಿಕ ಇತಿಹಾಸದ ಪುನರ್‌ನಿರ್ಮಾಣಕ್ಕೆ ಮಾತ್ರವಲ್ಲದೆ, ಮಹಿಳೆಯರ ಸ್ಥಿತಿ, ಸಾಮಾಜಿಕ ನ್ಯಾಯ ಮತ್ತು ಸಾಂಸ್ಕೃತಿಕ ಮೌಲ್ಯಗಳ ಕುರಿತು ಹೊಸ ಹೊಸ ಚಿಂತನೆಗೆ ದಾರಿ ಮಾಡಿಕೊಡುತ್ತದೆ.

**ಪ್ರಧಾನ ಪದಗಳು:** ವೀರಗಲ್ಲುಗಳು, ಮಹಿಳೆಯರ ಮೇಲಿನ ಹಿಂಸಾಚಾರ, ಲಿಂಗ ಸಂಬಂಧಗಳು, ಪ್ರಾದೇಶಿಕ ಇತಿಹಾಸ,ಶಾಸನಗಳು, ತ್ಯಾಗ ಬಲಿದಾನ ಶಿಲ್ಪಗಳು,ಸಾಂಸ್ಕೃತಿಕ ಅಧ್ಯಯನ, ಪಿತೃತ್ವದ ಸಮಾಜ.

**ಪೀಠಿಕೆ:** ಇತಿಹಾಸವು ಕೇವಲ ಭೂತಕಾಲದ ಘಟನೆಗಳ ದಾಖಲೆಯಲ್ಲ; ಅದು ವರ್ತಮಾನವನ್ನು ರೂಪಿಸುವ ಮತ್ತು ಭವಿಷ್ಯವನ್ನು ದಿಕ್ಕುನೀಡುವ ಸಜೀವ ಪ್ರಕ್ರಿಯೆಯಾಗಿದೆ. ಮಾನವ ನಿರ್ಮಿತವಾದ ಸಮಾಜದಲ್ಲಿ ಅನುಭವಗಳು, ಸಂಘರ್ಷಗಳು, ಸಾಧನೆಗಳು ಮತ್ತು ವಿಫಲತೆಗಳು ಇತಿಹಾಸದಲ್ಲಿ

1. **ಸಂಶೋಧಕರು,ಇತಿಹಾಸ ಅಧ್ಯಯನ ವಿಭಾಗ,ಮಹಾರಾಜ ಕಾಲೇಜು,ಮೈಸೂರು ವಿಶ್ವವಿದ್ಯಾನಿಲಯ ಮೈಸೂರು.**

ಸಂಚಿತವಾಗಿದ್ದು, ಅವುಗಳು ನಮ್ಮ ಸಾಮಾಜಿಕ ಚಿಂತನೆ, ಮೌಲ್ಯವ್ಯವಸ್ಥೆ ಮತ್ತು ನಡೆ–ನುಡಿಗಳನ್ನು ನಿರ್ಧರಿಸುತ್ತವೆ. ಈ ದೃಷ್ಟಿಯಿಂದ ಇತಿಹಾಸವು ಕೇವಲ ಜ್ಞಾಪಕಶಕ್ತಿ ಅಥವಾ ದಾಖಲೆ ಮಾತ್ರವಲ್ಲ, ಅದು ಒಂದು ಕ್ರಿಯಾತ್ಮಕ ಜ್ಞಾನವ್ಯವಸ್ಥೆ ಆಗಿದೆ. ಇತಿಹಾಸದ ಅಧ್ಯಯನವು ಸಮಾಜದ ಆಂತರಿಕ ರಚನೆಗಳನ್ನು, ಅಧಿಕಾರ ಸಂಬಂಧಗಳನ್ನು ಹಾಗೂ ಮೌಲ್ಯಗಳ ರೂಪುಗೊಳಿಸುವಿಕೆಯನ್ನು ತಿಳಿಯಲು ಹೆಚ್ಚು ಸಹಾಯಕವಾಗುತ್ತದೆ. ಆದಾಗ್ಯೂ, ಪಾರಂಪರಿಕ ಇತಿಹಾಸ ಬರವಣಿಗೆಯಲ್ಲಿ ರಾಜರು, ಯುದ್ಧಗಳು ಮತ್ತು ರಾಜಕೀಯ ಘಟನೆಗಳಿಗೆ ಹೆಚ್ಚಿನ ಮಹತ್ವ ನೀಡಲಾಗಿದ್ದು, ಸಾಮಾನ್ಯ ಜನರ ಬದುಕು, ಅವರ ನೋವು ಮತ್ತು ನಲಿವುಗಳು ಸಮಾಜದ ಅಡಿಪಾಯವನ್ನು ನಿರ್ಮಿಸಿದ ತಳಸಮುದಾಯಗಳ ಅನುಭವಗಳು ಬಹುಮಟ್ಟಿಗೆ ನಿರ್ಲಕ್ಷಿತವಾಗಿವೆ. ಈ ಕಾರಣದಿಂದ "ಅಧಿಕೃತ ಇತಿಹಾಸ"ವು ಏಕಮುಖೀಯಯಾಗಿ ರೂಪುಗೊಂಡಿದೆ. ಇದಕ್ಕೆ ಪ್ರತಿಯಾಗಿ, ಪ್ರಾದೇಶಿಕ ಇತಿಹಾಸ ಸಂಬಂಧಿತವಾದ ಅಧ್ಯಯನಗಳು ಉದಯಿಸಿಕೊಂಡು, ಇತಿಹಾಸವನ್ನು ಕೆಳಮಟ್ಟದ ಜನರ ದೃಷ್ಟಿಕೋನದಿಂದ ಮರುಪರಿಶೀಲಿಸಲು ಪ್ರೇರೇಪಿಸಿವೆ. ಈ ನೆಲೆ ಮತ್ತು ಹಿನ್ನೆಲೆಯಲ್ಲಿ "ಜನ ಇತಿಹಾಸ" ಎಂಬ ಪರಿಕಲ್ಪನೆ ಮಹತ್ವ ಪಡೆದಿದ್ದು, ಅದು ಇತಿಹಾಸವನ್ನು ಜನರ ಬದುಕಿನ ಅನುಭವಗಳ ಮೂಲಕ ಅರಿಯುವ ಹೊಸ ದೃಷ್ಟಿಕೋನವನ್ನು ಒದಗಿಸುತ್ತದೆ. ಈ ಜನ ಇತಿಹಾಸವನ್ನು ಪುನರ್‌ನಿರ್ಮಿಸಲು ವೀರಗಲ್ಲುಗಳು, ತ್ಯಾಗ ಮತ್ತು ಬಲಿದಾನ ಶಿಲ್ಪಗಳು ಮತ್ತು ಶಾಸನಗಳು ಅತ್ಯಂತ ಪ್ರಮುಖ ಮೂಲಗಳಾಗಿವೆ. ಇವುಗಳು ಕೇವಲ ವೀರರ ಸಾಹಸಗಳನ್ನು ಕೊಂಡಾಡುವುದಲ್ಲದೆ, ಸಮಾಜದ ಆಂತರಿಕ ಮೌಲ್ಯಗಳು, ಧಾರ್ಮಿಕ ನಂಬಿಕೆಗಳು, ಆರ್ಥಿಕ ಸ್ಥಿತಿಗಳು ಹಾಗೂ ಲಿಂಗ ಸಂಬಂಧಿತ ಸಂಬಂಧಗಳನ್ನು ಬಹುಸ್ಪಷ್ಟವಾಗಿಯೇ ಪ್ರತಿಬಿಂಬಿಸುತ್ತವೆ. ಇವುಗಳನ್ನು "ಮೌನ ದಾಖಲೆಗಳು" ಎಂದು ಕರೆಯಲಾಗುತ್ತದೆ. ಏಕೆಂದರೆ, ಅವುಗಳು ಮಾತನಾಡುವುದಿಲ್ಲ; ಆದರೆ ಅವುಗಳಲ್ಲಿ ಅಡಗಿರುವ ಸಂದೇಶಗಳು ಗಾಢವಾದ ಸಾಮಾಜಿಕ ಸತ್ಯಗಳನ್ನು ಅನಾವರಣಗೊಳಿಸುತ್ತವೆ. ಅದರಲ್ಲಿಯೂ ವಿಶೇಷವಾಗಿ ಶಿಲ್ಪಗಳಲ್ಲಿ ಕಾಣಿಸುವ ದೃಶ್ಯರೂಪಕಗಳು ಸಮಾಜದ ಮನೋಭಾವವನ್ನು ನೇರವಾಗಿ ಅರ್ಥೈಸಲು ಸಹಕಾರಿಯಾಗುತ್ತವೆ. ಈ ನೆಲೆ ಮತ್ತು ಹಿನ್ನೆಲೆಯಲ್ಲಿಯೇ ಕೋಲಾರ ಜಿಲ್ಲೆಯ ಪೆಣ್ಬುಯಿಲ್ ಶಿಲ್ಪಗಳು ವಿಶಿಷ್ಟವಾದ ಅಧ್ಯಯನ ಕ್ಷೇತ್ರವನ್ನು ಒದಗಿಸುತ್ತವೆ. "ಪೆಣ್ಬುಯಿಲ್" ಎಂಬ ಪರಿಕಲ್ಪನೆ ಯುದ್ಧದ ಕಾಲಮಾನದಲ್ಲಿ ಮಹಿಳೆಯರ ಮೇಲೆ ನಡೆದ ಹಿಂಸಾಚಾರ, ವಿಶೇಷವಾಗಿ ಲೈಂಗಿಕ ದೌರ್ಜನ್ಯ, ಅವಮಾನ ಮತ್ತು ಮಾನವೀಯ ಹಕ್ಕುಗಳ ಉಲ್ಲಂಘನೆಯನ್ನು ಸೂಚಿಸುತ್ತದೆ. ಈ ಶಿಲ್ಪಗಳು ಮಹಿಳೆಯರ ಅಸಹಾಯಕತೆ ಮತ್ತು ನೋವನ್ನು ಮಾತ್ರವಲ್ಲದೆ, ಪುರುಷರ "ರಕ್ಷಣಾ ಧರ್ಮ" ಮತ್ತು ಸಮಾಜದ ಪಿತೃತ್ವದ ಮೌಲ್ಯವ್ಯವಸ್ಥೆಯನ್ನು ಸಮಕಾಲದಲ್ಲಿ ಪ್ರತಿಬಿಂಬಿಸುತ್ತವೆ. ಇವುಗಳಲ್ಲಿ ಮಹಿಳೆಯನ್ನು ಸಾಮಾನ್ಯವಾಗಿ ಗೌರವದ ಸಂಕೇತವಾಗಿ ಚಿತ್ರಿಸಲಾಗಿದ್ದು, ಅವರ ಮೇಲೆ ನಡೆದ ದೌರ್ಜನ್ಯವನ್ನು ಸಮಾಜದ ಅವಮಾನವೆಂದು

ಪರಿಗಣಿಸಲಾಗುತ್ತದೆ. ಇದರ ಜೊತೆಗೆಯೇ ಕೋಲಾರ ಜಿಲ್ಲೆಯ ಪೆಣ್ಬುಯಿಲ್ ಶಿಲ್ಪಗಳು ಇತರೆ ಪ್ರದೇಶಗಳಿಗಿಂತ ವಿಭಿನ್ನವಾದ ಸಾಂಸ್ಕೃತಿಕ ಸಂವೇದನೆಯನ್ನು ತೋರಿಸುತ್ತವೆ. ಏಕೆಂದರೆ, ವಿಶೇಷವಾಗಿ ಮಹಿಳೆಯರನ್ನು ನಗ್ನವಾಗಿ ಅಥವಾ ಅತಿರೇಕವಾಗಿ ಚಿತ್ರಿಸದಿರುವುದು ಸ್ಥಳೀಯ ಸಂಸ್ಕೃತಿಯ ನೈತಿಕ ಮೌಲ್ಯಗಳನ್ನು ಸೂಚಿಸುತ್ತದೆ. ಇದು ಮಹಿಳಾ ದೇವತೆಗಳ ಆರಾಧನೆ, ಸ್ಥಳೀಯ ಧಾರ್ಮಿಕ ನಂಬಿಕೆಗಳು ಮತ್ತು ಸಾಮಾಜಿಕ ನಿಯಮಗಳೊಂದಿಗೆ ನಿಕಟವಾಗಿ ಸಂಬಂಧ ಹೊಂದಿರುತ್ತದೆ. ಈ ಅಂಶವು ಕೋಲಾರ ಪ್ರದೇಶದ ಶಿಲ್ಪಕಲೆಯ ವೈಶಿಷ್ಟ್ಯತೆಯನ್ನು ತೋರಿಸುತ್ತದೆ ಮತ್ತು ಪ್ರಾದೇಶಿಕ ಸಂಸ್ಕೃತಿಯ ವೈವಿಧ್ಯತೆಯನ್ನು ಉಲ್ಲೇಖಿಸುತ್ತದೆ. ಇದಲ್ಲದೆ, ಪೆಣ್ಬುಯಿಲ್ ಶಿಲ್ಪಗಳು ಯುದ್ಧ ಮತ್ತು ಸಮಾಜದ ನಡುವಿನ ಸಂಕೀರ್ಣ ಸಂಬಂಧವನ್ನು ಬಿಂಬಿಸುತ್ತವೆ. ಯುದ್ಧವು ಕೇವಲ ರಾಜಕೀಯ ಅಥವಾ ಸೈನಿಕ ಘಟನೆ ಅಲ್ಲ; ಅದು ಸಮಾಜದ ನೈತಿಕತೆಯನ್ನು, ಮಾನವೀಯ ಮೌಲ್ಯಗಳನ್ನು ಮತ್ತು ಲಿಂಗ ಸಂಬಂಧಿತ ಸಮೀಕರಣಗಳನ್ನು ಗಂಭೀರವಾಗಿ ಪ್ರಭಾವಿಸುತ್ತದೆ. ಮಹಿಳೆಯರ ಮೇಲೆ ನಡೆಯುವ ಹಿಂಸಾಚಾರವು ಶತ್ರುವಿನ ಮೇಲೆ ಜಯ ಸಾಧಿಸುವ ಒಂದು ವಿಧಾನವಾಗಿ ಬಳಸಲ್ಪಟ್ಟಿರುವುದು, ಆ ಕಾಲಮಾನದ ಸಾಮಾಜಿಕ ಮನೋಭಾವವನ್ನು ಸ್ಪಷ್ಟಪಡಿಸುತ್ತದೆ. ಈ ಅಂಶಗಳು ಇತಿಹಾಸದ ಗಾಢವಾದ ಮತ್ತು ಕೆಲವೊಮ್ಮೆ ನೋವು ಉಂಟುಮಾಡುವ ಸತ್ಯಗಳನ್ನು ನಮ್ಮ ಮುಂದಿಡುತ್ತವೆ. ಈ ಅಧ್ಯಯನವು ಕೇವಲ ಇತಿಹಾಸದ ಒಂದು ಘಟನೆಯನ್ನು ದಾಖಲಿಸುವುದಲ್ಲ; ಅದು ಮಹಿಳೆಯರ ಸ್ಥಿತಿ, ಲಿಂಗ ಸಮಾನತೆ, ಸಾಮಾಜಿಕ ನ್ಯಾಯ ಮತ್ತು ಸಾಂಸ್ಕೃತಿಕ ಮೌಲ್ಯಗಳ ಕುರಿತು ವಿಮರ್ಶಾತ್ಮಕ ಚಿಂತನೆಗೆ ಪ್ರೇರೇಪಿಸುತ್ತದೆ. ಇಂದಿನ ಸಮಾಜದಲ್ಲಿಯೂ ಮಹಿಳೆಯರ ಮೇಲಿನ ಹಿಂಸಾಚಾರ ಮುಂದುವರಿಯುತ್ತಿರುವ ಸಂದರ್ಭದಲ್ಲಿ ಇಂತಹ ಐತಿಹಾಸಿಕ ಅಧ್ಯಯನಗಳು ಜಾಗೃತಿ ಮೂಡಿಸಲು ಮತ್ತು ಸಮಾಜದ ನೈತಿಕ ಮೌಲ್ಯಗಳನ್ನು ಬಲಪಡಿಸಲು ಸಹಕಾರಿಯಾಗುತ್ತವೆ. ಕೋಲಾರ ಜಿಲ್ಲೆಯ ಪೆಣ್ಬುಯಿಲ್ ಶಿಲ್ಪಗಳ ಅಧ್ಯಯನವು ಇತಿಹಾಸ, ಸಮಾಜಶಾಸ್ತ್ರ, ಮಾನವಶಾಸ್ತ್ರ ಮತ್ತು ಸಾಂಸ್ಕೃತಿಕ ಅಧ್ಯಯನಗಳ ನಡುವಿನ ಅಂತರಶಾಖೀಯ ಸಂವಾದವನ್ನು ಉತ್ತೇಜಿಸುತ್ತದೆ. ಇದು ಪ್ರಾದೇಶಿಕ ಇತಿಹಾಸವನ್ನು ಪುನರ್‌ಅರ್ಥೈಸುವಲ್ಲಿ ಮಾತ್ರವಲ್ಲದೆ, ಭಾರತೀಯ ಸಮಾಜದ ಸ್ಮೃತಿ ಪರಂಪರೆ, ಲಿಂಗ ಸಂಬಂಧಗಳು ಮತ್ತು ಸಾಂಸ್ಕೃತಿಕ ಮನೋಭಾವಗಳನ್ನು ಆಳವಾಗಿ ಅರಿಯಲು ಮಹತ್ವದ ಕೊಡುಗೆಯನ್ನು ನೀಡುತ್ತದೆ. ಈ ರೀತಿಯ ಅಧ್ಯಯನಗಳು ಭವಿಷ್ಯದ ಸಂಶೋಧನೆಗಳಿಗೆ ಹೊಸ ದಿಕ್ಕುಗಳನ್ನು ನೀಡುವ ಸಾಮರ್ಥ್ಯವನ್ನು ಹೊಂದಿವೆ.

**ಅಧ್ಯಯನದ ಪ್ರಾಮುಖ್ಯತೆ:** ಕೋಲಾರ ಜಿಲ್ಲೆಯ ಪೆಣ್ಬುಯಿಲ್ ಶಿಲ್ಪಗಳ ಅಧ್ಯಯನವು ಇತಿಹಾಸ, ಸಮಾಜ ಮತ್ತು ಸಂಸ್ಕೃತಿಯ ಅನೇಕ ಆಯಾಮಗಳನ್ನು ಅರಿಯಲು ಮಹತ್ವದ್ದಾಗಿದೆ. ಈ ಅಧ್ಯಯನವು ಕೇವಲ ಶಿಲ್ಪಗಳ ವಿವರಣೆಗೆ ಸೀಮಿತವಾಗದೆ, ಅವುಗಳ ಮೂಲಕ ಪ್ರತಿಬಿಂಬಿಸುವ ಮಾನವೀಯ ಮೌಲ್ಯಗಳು, ಸಾಮಾಜಿಕ ರಚನೆ ಮತ್ತು ಲಿಂಗ ಸಂಬಂಧಿತ ಪ್ರಶ್ನೆಗಳ ವಿಶ್ಲೇಷಣೆಯನ್ನು

ಒಳಗೊಂಡಿರುತ್ತದೆ. ಈ ಅಧ್ಯಯನವು ಪ್ರಾದೇಶಿಕ ಇತಿಹಾಸದ ಮಹತ್ವವನ್ನು ಒತ್ತಿ ಹೇಳುತ್ತದೆ. ಪಾರಂಪರಿಕ ಇತಿಹಾಸ ಬರವಣಿಗೆಯಲ್ಲಿ ರಾಜರು ಮತ್ತು ಯುದ್ಧಗಳಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗುತ್ತದೆ. ಆದರೆ ಪೆಣ್ಬುಯಿಲ್ ಶಿಲ್ಪಗಳಂತಹ ಮೂಲಗಳು ಸಾಮಾನ್ಯ ಜನರ ಜೀವನ, ವಿಶೇಷವಾಗಿ ಮಹಿಳೆಯರ ಅನುಭವಗಳನ್ನು ಬೆಳಕಿಗೆ ತರುತ್ತವೆ. ಇದರಿಂದ "ಜನ ಇತಿಹಾಸ"ವನ್ನು ಪುನರ್ ರೂಪಿಸುವಲ್ಲಿ ಈ ಅಧ್ಯಯನ ಮಹತ್ವದ ಪಾತ್ರವಹಿಸುತ್ತದೆ. ಈ ಅಧ್ಯಯನವು ಮಹಿಳೆಯರ ಮೇಲಿನ ಹಿಂಸಾಚಾರದ ಐತಿಹಾಸಿಕ ಮೂಲಗಳನ್ನು ಅನಾವರಣಗೊಳಿಸುತ್ತದೆ. ಯುದ್ಧದ ಕಾಲಮಾನದಲ್ಲಿ ಮಹಿಳೆಯರನ್ನು ಅವಮಾನಿಸುವುದು, ಲೈಂಗಿಕ ದೌರ್ಜನ್ಯ ನಡೆಸುವುದು ಮತ್ತು ಅದನ್ನು ವಿಜಯದ ಸಂಕೇತವಾಗಿ ಪರಿಗಣಿಸುವುದು ಸಮಾಜದ ಪಿತೃತ್ವದ ಮನೋಭಾವವನ್ನು ಸ್ಪಷ್ಟಪಡಿಸುತ್ತದೆ. ಈ ದೃಷ್ಟಿಯಿಂದಲೂ ಕೂಡ ಪೆಣ್ಬುಯಿಲ್ ಶಿಲ್ಪಗಳು ಲಿಂಗಸಮಾನತೆ ಮತ್ತು ಮಹಿಳಾ ಹಕ್ಕುಗಳ ಚರ್ಚೆಗೆ ಮಹತ್ವದ ಆಧಾರಗಳಾಗಿವೆ. ಈ ಅಧ್ಯಯನವು ಶಿಲ್ಪಗಳು ಮತ್ತು ಶಾಸನಗಳನ್ನು "ಮೌನ ಇತಿಹಾಸದ ದಾಖಲೆಗಳು" ಎಂಬ ದೃಷ್ಟಿಯಿಂದ ನೋಡುವ ಅವಕಾಶವನ್ನು ಒದಗಿಸುತ್ತದೆ. ಇವುಗಳಲ್ಲಿ ಅಡಗಿರುವ ದೃಶ್ಯ ಮತ್ತು ಲಿಖಿತ ಮಾಹಿತಿಗಳು ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಇತಿಹಾಸವನ್ನು ಪುನರ್ ನಿರ್ಮಿಸಲು ಹೆಚ್ಚು ಹೆಚ್ಚು ಸಹಕಾರಿಯಾಗುತ್ತವೆ. ಕೋಲಾರ ಜಿಲ್ಲೆಯ ಪೆಣ್ಬುಯಿಲ್ ಶಿಲ್ಪಗಳು ಇತರೆ ಪ್ರದೇಶಗಳಿಗಿಂತ ವಿಭಿನ್ನವಾದ ಸಾಂಸ್ಕೃತಿಕ ಸಂವೇದನೆಯನ್ನು ತೋರಿಸುತ್ತವೆ. ಮಹಿಳೆಯರನ್ನು ನಗ್ನವಾಗಿ ಚಿತ್ರಿಸದಿರುವುದು, ಅವರ ಗೌರವವನ್ನು ಕಾಪಾಡುವ ಮನೋಭಾವವನ್ನು ಸೂಚಿಸುತ್ತದೆ. ಇದು ಸ್ಥಳೀಯ ಧಾರ್ಮಿಕ ನಂಬಿಕೆಗಳು ಮತ್ತು ಮಹಿಳಾ ದೇವತಾ ಆರಾಧನೆಯೊಂದಿಗೆ ನಿಕಟವಾಗಿ ಸಂಬಂಧ ಹೊಂದಿದೆ. ಈ ವೈಶಿಷ್ಟ್ಯತೆ ಪ್ರಾದೇಶಿಕ ಸಂಸ್ಕೃತಿಯ ವೈವಿಧ್ಯತೆಯನ್ನು ತೋರಿಸುತ್ತದೆ. ಈ ಅಧ್ಯಯನವು ಇಂದಿನ ಸಮಾಜಕ್ಕೂ ಪ್ರಸ್ತುತವಾಗಿರುತ್ತದೆ. ಮಹಿಳೆಯರ ಮೇಲಿನ ಹಿಂಸಾಚಾರ ಇನ್ನೂ ಮುಂದುವರಿಯುತ್ತಿರುವ ಸಂದರ್ಭದಲ್ಲಿ ಇತಿಹಾಸದ ಇಂತಹ ಘಟನೆಗಳನ್ನು ಅಧ್ಯಯನ ಮಾಡುವುದರಿಂದ ಸಮಾಜದಲ್ಲಿ ಜಾಗೃತಿ ಮೂಡಿಸಲು ಮತ್ತು ನೈತಿಕ ಮೌಲ್ಯಗಳನ್ನು ಬಲಪಡಿಸಲು ಸಹಾಯಕವಾಗುತ್ತದೆ. ಪೆಣ್ಬುಯಿಲ್ ಶಿಲ್ಪಗಳ ಅಧ್ಯಯನವು ಇತಿಹಾಸ, ಸಮಾಜಶಾಸ್ತ್ರ, ಮಾನವಶಾಸ್ತ್ರ ಮತ್ತು ಸಾಂಸ್ಕೃತಿಕ ಅಧ್ಯಯನಗಳ ನಡುವಿನ ಅಂತರಶಾಖೀಯ ಸಂವಾದವನ್ನು ಉತ್ತೇಜಿಸುತ್ತದೆ. ಇದು ಭವಿಷ್ಯದ ಸಂಶೋಧನೆಗಳಿಗೆ ಹೊಸ ದಾರಿಗಳನ್ನು ತೆರೆದಿಡುತ್ತದೆ.

**ಅಧ್ಯಯನದ ಉದ್ದೇಶಗಳು**

- ಪೆಣ್ಬುಯಿಲ್ ಪದದ ಅರ್ಥ ಮತ್ತು ಪರಿಕಲ್ಪನೆಯನ್ನು ವಿಶ್ಲೇಷಿಸುವುದು.
- ಕೋಲಾರ ಜಿಲ್ಲೆಯ ಪೆಣ್ಬುಯಿಲ್ ಶಿಲ್ಪಗಳ ಇತಿಹಾಸವನ್ನು ಅಧ್ಯಯನ ಮಾಡುವುದು.

- ಶಿಲ್ಪಗಳ ಮೂಲಕ ಮಹಿಳೆಯರ ಸಾಮಾಜಿಕ ಸ್ಥಿತಿಯನ್ನು ವಿಶ್ಲೇಷಿಸುವುದು.
- ಇತರೆ ಪ್ರದೇಶಗಳೊಂದಿಗೆ ತೂಲನಾ ಅಧ್ಯಯನ ನಡೆಸುವುದು.
- ಸಾಂಸ್ಕೃತಿಕ ಮತ್ತು ನೈತಿಕ ಮೌಲ್ಯಗಳನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಿಸುವುದು.

**ಅಧ್ಯಯನ ವಿಧಾನ:**

ಈ ಅಧ್ಯಯನವು ಶಾಸನಾಧಾರಿತ ವಿಶ್ಲೇಷಣೆ, ಶಿಲ್ಪಶಾಸ್ತ್ರೀಯ ಅಧ್ಯಯನ, ಸಾಹಿತ್ಯ ವಿಮರ್ಶೆ, ಕ್ಷೇತ್ರ ಅಧ್ಯಯನ, ತೂಲನಾ ವಿಧಾನವನ್ನು ಹೊಂದಿರುತ್ತದೆ

"ಪೆಣ್ಬುಯಿಲ್" ಎಂಬ ಪದವು "ಪೆಣ್" (ಹೆಣ್ಣು) ಮತ್ತು "ಪುಯ್ಯಲ್" (ಆಕ್ರಂದನ/ಅರಚಿಕೆ) ಎಂಬ ಪದಗಳಿಂದ ರೂಪುಗೊಂಡಿದ್ದು, ಹೆಣ್ಣಿನ ಕೂಗು, ಆಕ್ರಂದನ ಅಥವಾ ಸಹಾಯಕ್ಕಾಗಿ ಕೂಗುವ ಪರಿಸ್ಥಿತಿಯನ್ನು ಸೂಚಿಸುತ್ತದೆ. ಈ ಪದ ಪ್ರಯೋಗವು ಕೇವಲ ಭಾಷಾತ್ಮಕ ಅರ್ಥವನ್ನೇ ಹೊಂದಿರುವುದಲ್ಲದೆ, ಅದರ ಹಿಂದೆ ಆಳವಾದ ಸಾಮಾಜಿಕ ಮತ್ತು ಐತಿಹಾಸಿಕ ಅರ್ಥವ್ಯಾಪ್ತಿ ಅಡಗಿದೆ. ಇದು ಯುದ್ಧದ ಕಾಲಮಾನದಲ್ಲಿ ಮಹಿಳೆಯರು ಅನುಭವಿಸಿದ ಹಿಂಸಾಚಾರ, ಭಯ ಮತ್ತು ಅಸಹಾಯಕತೆಯ ಸಂಕೇತವಾಗಿದೆ. ಕೋಲಾರ ಪ್ರದೇಶದ ಶಾಸನಗಳಲ್ಲಿ "ಪೆಂಡಿರುಡೆಯುರ್ಚಿ" ಎಂಬ ಪದಪ್ರಯೋಗ ಕಂಡುಬರುತ್ತದೆ. ಈ ಪದವು ಮಹಿಳೆಯರ ಮೇಲೆ ನಡೆದ ದೌರ್ಜನ್ಯ, ಅವಮಾನ ಮತ್ತು ಲೈಂಗಿಕ ಹಿಂಸೆಯನ್ನು ಸೂಚಿಸುವ ಪ್ರಮುಖ ಐತಿಹಾಸಿಕ ದಾಖಲೆಯಾಗಿದೆ. ಇಂತಹ ಪದಗಳ ಬಳಕೆ, ಆ ಕಾಲಮಾನದ ಸಮಾಜದಲ್ಲಿ ಈ ಘಟನೆಗಳು ಅಪರೂಪದದ್ದಲ್ಲದೆ, ಒಂದು ಸಾಮಾನ್ಯ ಯುದ್ಧ ಸಂಬಂಧಿತ ಘಟನೆಗಳಾಗಿದ್ದವು ಎಂಬುದನ್ನು ತೋರಿಸುತ್ತದೆ. ಶಾಸನಗಳಲ್ಲಿ ಈ ರೀತಿಯ ಉಲ್ಲೇಖಗಳು ಕಾಣಿಸಿಕೊಳ್ಳುವುದು, ಇವುಗಳನ್ನು ಸಮಾಜವು ಗಮನಿಸಿದ ಮತ್ತು ದಾಖಲಿಸಿದ ಘಟನೆ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಈ ಪೆಣ್ಬುಯಿಲ್ ಘಟನೆಗಳು ಸಾಮಾನ್ಯವಾಗಿ "ಊರಳಿವು" ಅಂದರೆ; ಗ್ರಾಮದ ಮೇಲೆ ದಾಳಿ ಮತ್ತು "ತುರುಗೊಳ್" ಎಂದರೆ; ದನಗಳ ಕಳ್ಳತನವೂ ಕೂಡ ಈ ಸಂದರ್ಭಗಳಲ್ಲಿ ಸಂಭವಿಸುತ್ತಿದ್ದವು. ಯುದ್ಧದ ಸಮಯದಲ್ಲಿ ಶತ್ರು ಪಡೆಯವರು ಕೇವಲ ಆಸ್ತಿ ಸಂಪತ್ತನ್ನು ಲೂಟಿ ಮಾಡುವುದಲ್ಲದೆ, ಗ್ರಾಮಸ್ಥರ ಮೇಲೆ ದೌರ್ಜನ್ಯ ನಡೆಸುತ್ತಿದ್ದರು. ಈ ಸಂದರ್ಭದಲ್ಲಿ ಮಹಿಳೆಯರು ಅತ್ಯಂತ ಅಸುರಕ್ಷಿತ ಸ್ಥಿತಿಯಲ್ಲಿ ಇದ್ದು, ಅವರ ಮೇಲೆ ದೈಹಿಕ ಹಾಗೂ ಮಾನಸಿಕ ಹಿಂಸಾಚಾರ ನಡೆಯುತ್ತಿತ್ತು. ಇದರಿಂದ ಪೆಣ್ಬುಯಿಲ್ ಎಂಬ ಪರಿಕಲ್ಪನೆ ಯುದ್ಧದ ಕ್ರೂರತೆಯ ಒಂದು ಪ್ರಮುಖ ಅಂಶವಾಗಿ ಬೆಳೆಯಿತು.

ಸರಿಸುಮಾರು ಕ್ರಿ.ಶ. 7ನೆಯ ಶತಮಾನದಿಂದ 13ನೆಯ ಶತಮಾನವರೆಗೆ ಪೆಣ್ಬುಯಿಲ್ ಘಟನೆಗಳ ಉಲ್ಲೇಖಗಳು ಕೆಲವು ಶಾಸನಗಳಲ್ಲಿ ದೊರಕುತ್ತವೆ. ಈ ಅವಧಿ ದಕ್ಷಿಣ ಭಾರತದ ಇತಿಹಾಸದಲ್ಲಿ ರಾಜಕೀಯ ಅಶಾಂತಿ ಮತ್ತು ಯುದ್ಧಗಳ ಕಾಲಮಾನವಾಗಿದ್ದು, ಗಂಗರು, ಚೋಳರು, ಹೊಯ್ಸಳರು ಹಾಗೂ ವಿಜಯನಗರ ಸಾಮ್ರಾಜ್ಯದಂತಹ ಪ್ರಮುಖ ರಾಜವಂಶಗಳ ಆಳ್ವಿಕೆಯನ್ನು ಒಳಗೊಂಡಿದೆ. ಈ ಕಾಲಮಾನದಲ್ಲಿ ನಡೆದ ನಿರಂತರ ಯುದ್ಧಗಳು ಮತ್ತು ಆಕ್ರಮಣಗಳು ಸಮಾಜದ ಸಾಮಾನ್ಯ ಜೀವನದ ಮೇಲೆ ಗಂಭೀರ ಪರಿಣಾಮ ಬೀರಿದವು. ಅದರಲ್ಲಿಯೂ ವಿಶೇಷವಾಗಿ, ಮಹಿಳೆಯರ ಮೇಲಿನ ಹಿಂಸಾಚಾರವು ಯುದ್ಧದ ಒಂದು ಅಂಗವಾಗಿಯೇ ಪರಿಗಣಿಸಲ್ಪಟ್ಟಿತ್ತು. ಕೋಲಾರ ಜಿಲ್ಲೆಯ ಪೆಣ್ಬುಯಿಲ್ ಶಿಲ್ಪಗಳಲ್ಲಿ ಈ ಸಾಮಾಜಿಕ ವಾಸ್ತವತೆಗಳು ದೃಶ್ಯರೂಪದಲ್ಲಿ ಪ್ರತಿಬಿಂಬಿಸುತ್ತವೆ. ಈ ಶಿಲ್ಪಗಳಲ್ಲಿ ಸಾಮಾನ್ಯವಾಗಿ ಕಾಣುವ ಪ್ರಮುಖ ಲಕ್ಷಣಗಳೆಂದರೆ; ಇವುಗಳಲ್ಲಿ ವೀರನ ಯುದ್ಧದ ದೃಶ್ಯಗಳು, ಶತ್ರುಗಳ ವಿರುದ್ಧ ಹೋರಾಡುತ್ತಿರುವ ವೀರರನ್ನು ಚಿತ್ರಿಸುವ ಮೂಲಕ ಸಮಾಜವು ರಕ್ಷಣಾ ಧರ್ಮವನ್ನು ಮಹತ್ವಪೂರ್ಣವಾಗಿ ಪರಿಗಣಿಸಿದ್ದನ್ನು ತೋರಿಸುತ್ತದೆ. ಮಹಿಳೆಯರ ಅಸಹಾಯಕ ಸ್ಥಿತಿಯಲ್ಲಿ ಮಹಿಳೆಯರನ್ನು ರಕ್ಷಣೆಗೆ ಅಗತ್ಯವಿರುವ ವ್ಯಕ್ತಿಗಳಾಗಿ ಚಿತ್ರಿಸಲಾಗಿದೆ, ಇದು ಅವರ ಸಾಮಾಜಿಕ ಸ್ಥಾನವನ್ನು ಪ್ರತಿಬಿಂಬಿಸುತ್ತದೆ. ಶತ್ರುಗಳಿಂದ ಹಿಂಸೆಯಲ್ಲಿ ಹಿಂಸಾಚಾರದ ಅಂಶವನ್ನು ನೇರವಾಗಿ ಅಥವಾ ಸಂಕೇತಾತ್ಮಕವಾಗಿ ತೋರಿಸಲಾಗಿದೆ. ಆದರೆ, ಕೋಲಾರ ಜಿಲ್ಲೆಯ ಪೆಣ್ಬುಯಿಲ್ ಶಿಲ್ಪಗಳು ಇತರೆ ಪ್ರದೇಶಗಳಿಗಿಂತ ಕೆಲವು ಪ್ರಮುಖ ವೈಶಿಷ್ಟ್ಯತೆಗಳನ್ನು ಹೊಂದಿರುತ್ತವೆ. ಏಕೆಂದರೆ; ವಿಶೇಷವಾಗಿ ಇಲ್ಲಿ ಮಹಿಳೆಯರನ್ನು ನಗ್ನ ಅಥವಾ ಅರೆನಗ್ನವಾಗಿ ಚಿತ್ರಿಸುವುದು ಕಾಣಿಸಿಕೊಳ್ಳುವುದಿಲ್ಲ. ಈ ಅಂಶವು ಸ್ಥಳೀಯ ಸಮಾಜದ ಸಾಂಸ್ಕೃತಿಕ ಸಂವೇದನೆ, ನೈತಿಕ ಮೌಲ್ಯಗಳು ಮತ್ತು ಮಹಿಳೆಯರ ಗೌರವವನ್ನು ಕಾಪಾಡುವ ಮನೋಭಾವವನ್ನು ಸೂಚಿಸುತ್ತದೆ. ಇವುಗಳಲ್ಲಿ ಹಿಂಸಾಚಾರದ ಅಂಶವನ್ನು ನೇರವಾಗಿ ತೋರಿಸುವ ಬದಲು, ಸಂಕೇತಾತ್ಮಕವಾಗಿ ಅಥವಾ ಸೂಕ್ಷ್ಮವಾಗಿ ಅಭಿವ್ಯಕ್ತಿಸುವ ಪ್ರವೃತ್ತಿ ಕಂಡುಬರುತ್ತದೆ. ಇದರ ಜೊತೆಗೆ, ಈ ಶಿಲ್ಪಗಳು ಕೇವಲ ಘಟನೆಯ ದಾಖಲೆಯಲ್ಲ; ಅವು ಸಮಾಜದ ನೈತಿಕ ಮೌಲ್ಯಗಳನ್ನು ಪ್ರತಿಪಾದಿಸುವ ಸಾಧನಗಳಾಗಿಯೂ ಕಾರ್ಯನಿರ್ವಹಿಸುತ್ತವೆ. ಯಾವುದೇ ಒಬ್ಬ ವೀರನ ಶೌರ್ಯವನ್ನು ಕೊಂಡಾಡುವುದರ ಜೊತೆಗೆ, ಮಹಿಳೆಯರ ರಕ್ಷಣೆಯನ್ನು ಒಂದು ಧರ್ಮವಾಗಿ ಪ್ರತಿಪಾದಿಸುವ ಮೂಲಕ, ಸಮಾಜದ ನೈತಿಕ ಮಾನದಂಡಗಳನ್ನು ಸ್ಥಾಪಿಸುತ್ತವೆ. ಇದು ಪಿತೃತ್ವದ ಸಮಾಜದಲ್ಲಿ ಮಹಿಳೆಯರನ್ನು "ಗೌರವದ ಸಂಕೇತ"ವಾಗಿ ಪರಿಗಣಿಸಿದ ರೀತಿಯನ್ನು ತೋರಿಸುತ್ತದೆ. ಕೋಲಾರ ಜಿಲ್ಲೆಯ ಪೆಣ್ಬುಯಿಲ್ ಶಿಲ್ಪಗಳು ಇತಿಹಾಸದ ಮೌನ ಸಾಕ್ಷಿಗಳಾಗಿದ್ದು, ಅವುಗಳ ಮೂಲಕ ಯುದ್ಧದ ಕ್ರೂರತೆ, ಮಹಿಳೆಯರ ಸ್ಥಿತಿ, ಸಾಮಾಜಿಕ ಮೌಲ್ಯಗಳು ಮತ್ತು ಸಾಂಸ್ಕೃತಿಕ ಸಂವೇದನೆಗಳನ್ನು ಸಮಗ್ರವಾಗಿ ಅರಿಯಬಹುದು. ಇವುಗಳು ಪ್ರಾದೇಶಿಕ ಇತಿಹಾಸವನ್ನು ಮಾತ್ರವಲ್ಲದೆ, ಭಾರತೀಯ

ಸಮಾಜದ ಲಿಂಗ ಸಂಬಂಧಿತ ರಚನೆಗಳನ್ನು ಮತ್ತು ಸ್ಮೃತಿ ಪರಂಪರೆಯನ್ನು ಸ್ಥೂಲವಾಗಿಯೇ ವಿಶ್ಲೇಷಿಸಲು ಮಹತ್ವದ ಆಧಾರಗಳಾಗಿರುತ್ತವೆ.

**ಕೋಲಾರ ಜಿಲ್ಲೆಯಲ್ಲಿನ ಪ್ರಮುಖ ಪೆಣ್ಬುಯಿಲ್ ಶಿಲ್ಪಗಳ ಕುರಿತ ವಿಶ್ಲೇಷಣೆ**

ಕೋಲಾರ ಜಿಲ್ಲೆಯೂ ಪ್ರಾಚೀನ ಕಾಲಮಾನದಿಂದಲೂ ಶಿಲ್ಪಕಲೆ, ಶಾಸನ ಪರಂಪರೆ ಮತ್ತು ವೀರಗಲ್ಲುಗಳ ಸಮೃದ್ಧ ಕೇಂದ್ರವಾಗಿದ್ದು, ಇಲ್ಲಿ ಕಂಡುಬರುವ ಪೆಣ್ಬುಯಿಲ್ ಶಿಲ್ಪಗಳು ವಿಶಿಷ್ಟವಾದ ಇತಿಹಾಸಾತ್ಮಕ ಹಾಗೂ ಸಾಮಾಜಿಕ ಅರ್ಥಗಳನ್ನು ಹೊಂದಿರುತ್ತವೆ. ಈ ಶಿಲ್ಪಗಳು ಯುದ್ಧದ ಕಾಲಮಾನದ ಸಂದರ್ಭದಲ್ಲಿ ಮಹಿಳೆಯರ ಮೇಲೆ ನಡೆದ ಹಿಂಸಾಚಾರ, ಅವಮಾನ ಹಾಗೂ ಅದಕ್ಕೆ ಸಮಾಜ ನೀಡಿದ ಪ್ರತಿಕ್ರಿಯೆಯನ್ನು ದೃಶ್ಯರೂಪದಲ್ಲಿ ದಾಖಲಿಸುತ್ತವೆ. ಕೋಲಾರ ಜಿಲ್ಲೆಯ ವಿವಿಧ ಭಾಗಗಳಲ್ಲಿ ಕಂಡುಬರುವ ಪೆಣ್ಬುಯಿಲ್ ಶಿಲ್ಪಗಳನ್ನು ಕೆಳಗಿನಂತೆ ವಿಶ್ಲೇಷಿಸಲಾಗಿದೆ. ಅವುಗಳೆಂದರೆ;

**ಕೋಲಾರ ನಗರ ಸುತ್ತಮುತ್ತಲಿನ ಪೆಣ್ಬುಯಿಲ್ ಶಿಲ್ಪಗಳು:** ಕೋಲಾರ ಜಿಲ್ಲೆಯೂ ಕರ್ನಾಟಕ ರಾಜ್ಯದಲ್ಲಿನ ಜಿಲ್ಲೆಗಳಲ್ಲಿ ಒಂದಾಗಿದೆ. ಈ ಕೋಲಾರ ನಗರದ ಸುತ್ತಮುತ್ತ ಪತ್ತೆಯಾದ ಕೆಲವು ಶಿಲ್ಪಗಳಲ್ಲಿ ಯುದ್ಧದ ಕಾಲಮಾನದಲ್ಲಿನ ದೃಶ್ಯಗಳೊಂದಿಗೆ ಮಹಿಳೆಯರ ರಕ್ಷಣೆಗೆ ನಡೆದ ಹೋರಾಟಗಳನ್ನು ಚಿತ್ರಿಸಲಾಗಿರುತ್ತದೆ. ಈ ಶಿಲ್ಪಗಳಲ್ಲಿ ಶತ್ರುಗಳಿಂದ ಮಹಿಳೆಯನ್ನು ರಕ್ಷಿಸುವ ವೀರನ ಚಿತ್ರಣ ಕಾಣಿಸುತ್ತದೆ. ಕೆಲವೆಡೆ ಮಹಿಳೆಯನ್ನು ಕಾಪಾಡಲು ತನ್ನ ಪ್ರಾಣ ತ್ಯಾಗ ಮಾಡಿದ ವೀರರನ್ನು ಕೊಂಡಾಡಲಾಗಿರುತ್ತದೆ. ಮಹಿಳೆಯರ ಮಾನ ಗೌರವವನ್ನು ಉಳಿಸುವುದು ಪ್ರಮುಖ ಮೌಲ್ಯವಾಗಿ ತೋರಿಸಲಾಗಿದೆ. ಈ ಶಿಲ್ಪಗಳು ಪೆಣ್ಬುಯಿಲ್ ಪರಿಕಲ್ಪನೆಯನ್ನು ನೇರವಾಗಿ ತೋರಿಸದಿದ್ದರೂ, ಅದರ ವಿರುದ್ಧದ ಸಾಮಾಜಿಕ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುತ್ತವೆ. ಅವುಗಳೆಂದರೆ;

**ಮಾಲೂರು ತಾಲ್ಲೂಕಿನ ಶಿಲ್ಪಗಳು:** ಮಾಲೂರು ಕೋಲಾರ ಜಿಲ್ಲೆಯ ಒಂದು ಪ್ರಮುಖ ತಾಲೂಕು ಮತ್ತು ಪಟ್ಟಣವಾಗಿದೆ. ಇದು ಬೆಂಗಳೂರು ಗ್ರೇಟರ್ ಬೆಂಗಳೂರು ಪ್ರದೇಶದಿಂದ ಸರುಸಮಾರು 50 ಕಿಲೋಮೀಟರ್ ಮತ್ತು ಕೋಲಾರದಿಂದ 30 ಕಿಲೋಮೀಟರ್ ದೂರದಲ್ಲಿರುತ್ತದೆ. ಪ್ರದೇಶದಲ್ಲಿ ದೊರಕುವ ಪೆಣ್ಬುಯಿಲ್ ಶಿಲ್ಪಗಳು ಹೆಚ್ಚು ಸ್ಪಷ್ಟವಾದ ಸಾಮಾಜಿಕ ಅರ್ಥವನ್ನು ಹೊಂದಿರುತ್ತವೆ. ಮಹಿಳೆಯರನ್ನು ಅಪಹರಿಸುವ ಅಥವಾ ಹಿಂಸಿಸುವ ದೃಶ್ಯಗಳನ್ನು ಸಂಕೇತರೂಪದಲ್ಲಿ ತೋರಿಸಲಾಗಿದೆ. ಈ ಘಟನೆಗಳನ್ನು ತಡೆಯಲು ಗ್ರಾಮಸ್ಥರು ಅಥವಾ ಯೋಧರು ಮಾಡಿದ ಹೋರಾಟವನ್ನು ಚಿತ್ರಿಸಲಾಗಿದೆ. ಶಿಲ್ಪಗಳಲ್ಲಿ ಗೊಂದಲ, ಸಂಘರ್ಷ ಮತ್ತು ಆತಂಕದ ಭಾವನೆಗಳನ್ನು ಸೂಕ್ಷ್ಮವಾಗಿ ವ್ಯಕ್ತಪಡಿಸಲಾಗಿದೆ. ಈ ಶಿಲ್ಪಗಳು ಯುದ್ಧವು ಕೇವಲ ರಾಜಕೀಯ ಸಂಘರ್ಷವಲ್ಲ, ಸಾಮಾನ್ಯ ಜನರ ಜೀವನವನ್ನು ಹೇಗೆ ಹಾನಿಗೊಳಿಸುತ್ತದೆ ಎಂಬುದನ್ನು ತೋರಿಸುತ್ತವೆ.

**ಮುಳಬಾಗಿಲು ತಾಲ್ಲೂಕಿನ ಪೆಣ್ಬುಯಿಲ್ ಶಿಲ್ಪಗಳು:** ಮುಳಬಾಗಿಲು ಕೋಲಾರ ಜಿಲ್ಲೆಯ ಒಂದು ಮತ್ತು ಆಡಳಿತ ಕೇಂದ್ರವಾಗಿದೆ. ಇದು ಆಂದ್ರ ಪ್ರದೇಶ ರಾಜ್ಯದ ಗಡಿಹತ್ತಿರ ಇರುವ ಊರಾಗಿದೆ. ಇದು ಬೆಂಗಳೂರು ಮತ್ತು ಚೆನ್ನೈ ರಾಷ್ಟ್ರೀಯ ಹೆದ್ದಾರಿಯಲ್ಲಿ ಕೋಲಾರದ ಪೂರ್ವಕ್ಕೆ 30 ಕಿಲೋಮೀಟರ್ ದೂರದಲ್ಲಿರುತ್ತದೆ. ಈ ಪ್ರದೇಶವು ಪೆಣ್ಬುಯಿಲ್ ಶಿಲ್ಪಗಳ ದೃಷ್ಟಿಯಿಂದ ವಿಶೇಷ ಸ್ಥಾನವನ್ನು ಹೊಂದಿದೆ. ಇಲ್ಲಿ ಕಂಡುಬರುವ ಶಿಲ್ಪಗಳಲ್ಲಿ ಮಹಿಳೆಯರ ಅವಮಾನವನ್ನು ನೇರವಾಗಿ ಚಿತ್ರಿಸುವ ಬದಲು, ಸಂಕೇತಾತ್ಮಕವಾಗಿ ಸೂಚಿಸಲಾಗಿದೆ. ಕೆಲವು ಶಿಲ್ಪಗಳಲ್ಲಿ ಮಹಿಳೆಯರನ್ನು ರಕ್ಷಿಸಲು ಯೋಧರು ಶತ್ರುಗಳ ವಿರುದ್ಧ ಹೋರಾಡುತ್ತಿರುವ ದೃಶ್ಯಗಳಿವೆ. ಶಿಲ್ಪಗಳ ಮೇಲಿರುವ ಶಾಸನಗಳು ಘಟನೆಗಳ ಹಿನ್ನೆಲೆಯನ್ನು ತಿಳಿಸಲು ಸಹಕಾರಿಯಾಗುತ್ತವೆ. ಈ ಪ್ರದೇಶದ ಶಿಲ್ಪಗಳು ಸಾಂಸ್ಕೃತಿಕ ಸಂವೇದನೆಯನ್ನು ಕಾಪಾಡಿಕೊಂಡು, ಗಂಭೀರ ಸಾಮಾಜಿಕ ಸಮಸ್ಯೆಯನ್ನು ಸೂಕ್ಷ್ಮವಾಗಿ ಪ್ರತಿಬಿಂಬಿಸುತ್ತವೆ. ಇಲ್ಲಿನ ತಾವರೆಕೆರೆ ಗ್ರಾಮವು ಈ ಕೋಲಾರ ಕೇಂದ್ರೀಯ ಪ್ರದೇಶದ ಪೂರ್ವಕ್ಕೆ ಸರಿಸುಮಾರು 39 ಕಿಲೋಮೀಟರ್ ದೂರದಲ್ಲಿದೆ. ಈ ಗ್ರಾಮದಲ್ಲಿನ ನೊಳಂಬರ ಆಳ್ವಿಕೆಯ ಕಾಲಮಾನದ ಶಾಸನವೊಂದು ಮಹಿಳೆಯರ ಮೇಲೆ ದೌರ್ಜನ್ಯ ಹಾಗೂ ವೀರನ ಹೋರಾಟದ ಉಲ್ಲೇಖವಿದೆ. ಹಾಗೆಯೇ, ಬಲ್ಲ ಗ್ರಾಮವು ಮುಳಬಾಗಿಲು ತಾಲೂಕು ಕೇಂದ್ರೀಯ ಪ್ರದೇಶದಿಂದ ಸರಿಸುಮಾರು 40 ಕಿಲೋಮೀಟರ್ ದೂರದಲ್ಲಿದೆ. ಈ ಗ್ರಾಮದಲ್ಲಿ ತುರುಗೊಳ್, ಊರಳಿವು ಮತ್ತು ಪೆಣ್ಬುಯಿಲ್ ಮೂರು ಘಟನೆಗಳ ಸಮನ್ವಯ ಈ ಸ್ಥಳಗಳು ಕೋಲಾರ ಜಿಲ್ಲೆಯ ಪೆಣ್ಬುಯಿಲ್ ಪರಂಪರೆಯನ್ನು ಸ್ಪಷ್ಟಪಡಿಸುತ್ತವೆ.

**ಶ್ರೀನಿವಾಸಪುರ ತಾಲ್ಲೂಕಿನ ಶಿಲ್ಪಗಳು:** ಶ್ರೀನಿವಾಸಪುರವು ಕೋಲಾರ ಜಿಲ್ಲೆಯ ತಾಲೂಕು ಕೇಂದ್ರಗಳಲ್ಲಿ ಒಂದಾಗಿದ್ದು, ಇದು ಜಿಲ್ಲಾ ಕೇಂದ್ರದಿಂದ ಈಶಾನ್ಯಕ್ಕೆ ಸರಿಸುಮಾರು 24 ಕಿಲೋಮೀಟರ್ ದೂರದಲ್ಲಿದೆ. ಈ ಭಾಗದಲ್ಲಿನ ಪೆಣ್ಬುಯಿಲ್ ಶಿಲ್ಪಗಳು ಸ್ಥಳೀಯ ಸಮಾಜದ ಮೌಲ್ಯವ್ಯವಸ್ಥೆಯನ್ನು ಸ್ಪಷ್ಟಪಡಿಸುತ್ತವೆ. ಮಹಿಳೆಯರ ರಕ್ಷಣೆಗೆ ಸಮಾಜ ಒಟ್ಟಾಗಿ ಪ್ರತಿಕ್ರಿಯಿಸಿದ ದೃಶ್ಯಗಳು ಕಾಣಿಸುತ್ತವೆ. ಕೆಲವೆಡೆ ಸಮುದಾಯದ ಒಗ್ಗಟ್ಟು ಮತ್ತು ಸಾಮಾಜಿಕ ಜವಾಬ್ದಾರಿಯನ್ನು ತೋರಿಸಲಾಗಿದೆ ಮಹಿಳೆಯರನ್ನು 'ಮಾನ ಮತ್ತು ಗೌರವದ ಸಂಕೇತ'ವಾಗಿ ಚಿತ್ರಿಸಲಾಗಿದೆ. ಇದು ಪಿತೃತ್ವದ ಸಮಾಜದಲ್ಲಿಯೂ ಮಹಿಳೆಯರ ಗೌರವವನ್ನು ಕಾಪಾಡುವ ಸಾಮಾಜಿಕ ನಿಯಮಗಳಿದ್ದುದನ್ನು ಸೂಚಿಸುತ್ತದೆ. ಇದೇ ತಾಲೂಕಿನ ನಂಬಿಹಳ್ಳಿ ಗ್ರಾಮದಲ್ಲಿ ಚೋಳರ ಅಳ್ವಿಕೆಯ ಕಾಲಮಾನದಲ್ಲಿ ಶಾಸನವೊಂದು ಪೆಣ್ಬುಯಿಲ್ ಘಟನೆಗೆ ಸಂಬಂಧಿಸಿದ ಉಲ್ಲೇಖವಿದೆ.

**ಬಂಗಾರಪೇಟೆ ಪ್ರದೇಶದ ಶಿಲ್ಪಗಳು:** ಬಂಗಾರಪೇಟೆ ತಾಲೂಕು ಪ್ರದೇಶವು ಕೋಲಾರ ಜಿಲ್ಲಾ ಕೇಂದ್ರೀಯ ಪ್ರದೇಶದಿಂದ ಸರಿಸುಮಾರು 18 ಕಿಲೋಮೀಟರ್ ದೂರದಲ್ಲಿದೆ. ಈ ಭಾಗದಲ್ಲಿ ದೊರಕುವ ಶಿಲ್ಪಗಳು ಕಲಾತ್ಮಕ ದೃಷ್ಟಿಯಿಂದ ವಿಶಿಷ್ಟವಾಗಿವೆ. ಶಿಲ್ಪಗಳಲ್ಲಿ ಯುದ್ಧದ ಚಲನೆ, ಭಾವನೆ ಮತ್ತು ಘಟನೆಗಳ

ತೀವ್ರತೆಯನ್ನು ಸ್ಪಷ್ಟವಾಗಿ ತೋರಿಸಲಾಗಿದೆ. ಮಹಿಳೆಯರ ಸ್ಥಿತಿಯನ್ನು ನೇರವಾಗಿ ಚಿತ್ರಿಸದೇ, ಪರೋಕ್ಷವಾಗಿ ಸೂಚಿಸಲಾಗಿದೆ. ವೀರರ ಶೌರ್ಯವನ್ನು ಮಹತ್ವಪೂರ್ಣವಾಗಿ ಕೊಂಡಾಡಲಾಗಿದೆ. ಇಲ್ಲಿ ಪೆಣ್ಬುಯಿಲ್ ಅಂಶದ 'ಹಿನ್ನಲೆಯಲ್ಲಿ' ಇದ್ದರೂ, ಅದರ ಪರಿಣಾಮವನ್ನು ಸ್ಪಷ್ಟವಾಗಿ ತೋರಿಸಲಾಗಿದೆ.

ಕೋಲಾರ ಜಿಲ್ಲೆಯ ಪೆಣ್ಬುಯಿಲ್ ಶಿಲ್ಪಗಳ ಸಮಗ್ರ ವಿಶ್ಲೇಷಣೆಯಿಂದ ಕೆಲವು ಪ್ರಮುಖ ಅಂಶಗಳು ಹೊರಹೊಮ್ಮುತ್ತವೆ. ಅವುಗಳೆಂದರೆ; ಕೋಲಾರ ಜಿಲ್ಲೆಯ ಶಿಲ್ಪಗಳಲ್ಲಿ ಮಹಿಳೆಯರ ಮೇಲಿನ ಹಿಂಸಾಚಾರವನ್ನು ನೇರವಾಗಿ ಚಿತ್ರಿಸದೆ, ಬರೀ ಸಂಕೇತಾತ್ಮಕವಾಗಿ ತೋರಿಸಲಾಗಿರುತ್ತದೆ. ಇದು ಸ್ಥಳೀಯ ಸಂಸ್ಕೃತಿಯ ಸೌಮ್ಯತೆ ಮತ್ತು ಸಂವೇದನೆಯನ್ನು ಸೂಚಿಸುತ್ತದೆ. ಈ ಶಿಲ್ಪಗಳು ಮಹಿಳೆಯನ್ನು ಕೇವಲ ಬಲಹೀನ ವ್ಯಕ್ತಿಯಾಗಿ ಚಿತ್ರಿಸದೆ, ಅವರ ಗೌರವವನ್ನು ಕಾಪಾಡುವ ಸಮಾಜದ ಜವಾಬ್ದಾರಿಯನ್ನು ಒತ್ತಿ ಹೇಳುತ್ತವೆ. ಪೆಣ್ಬುಯಿಲ್ ಶಿಲ್ಪಗಳು ಪಿತೃತ್ವದ ಸಮಾಜದಲ್ಲಿ ಮಹಿಳೆಯರ ಸ್ಥಾನವನ್ನು ತೋರಿಸುತ್ತವೆ. ಮಹಿಳೆಯರನ್ನು "ಗೌರವದ ಸಂಕೇತ"ವಾಗಿ ನೋಡಿದರೂ, ಅವರ ಸ್ವತಂತ್ರ ವ್ಯಕ್ತಿತ್ವವನ್ನು ಕಡಿಮೆ ಮಾಡಲಾಗಿದೆ. ಈ ಶಿಲ್ಪಗಳು ಯುದ್ಧವು ಕೇವಲ ರಾಜಕೀಯ ಘಟನೆ ಅಲ್ಲ, ಅದು ಸಮಾಜದ ಮೇಲೆ ಹೇಗೆ ಪರಿಣಾಮ ಬೀರುತ್ತದೆ ಎಂಬುದನ್ನು ತೋರಿಸುತ್ತವೆ. ಕೋಲಾರ ಜಿಲ್ಲೆಯ ಶಿಲ್ಪಗಳು ಇತರೆ ಪ್ರದೇಶಗಳಿಗಿಂತ ವಿಭಿನ್ನವಾಗಿ, ಸಂಸ್ಕೃತಿಯ ಮೌಲ್ಯಗಳನ್ನು ಕಾಪಾಡಿಕೊಂಡು, ಗಂಭೀರ ವಿಷಯಗಳನ್ನು ಸೂಕ್ಷ್ಮವಾಗಿ ಚಿತ್ರಿಸುತ್ತವೆ. ಕೋಲಾರ ಜಿಲ್ಲೆಯ ಪೆಣ್ಬುಯಿಲ್ ಶಿಲ್ಪಗಳು ಇತಿಹಾಸದ ಮೌನ ಸಾಕ್ಷಿಗಳಾಗಿದ್ದು, ಅವುಗಳ ಮೂಲಕ ಮಹಿಳೆಯರ ಸ್ಥಿತಿ, ಸಾಮಾಜಿಕ ಮೌಲ್ಯಗಳು ಮತ್ತು ಯುದ್ಧದ ಕಾಲಮಾನದ ವಾಸ್ತವತೆಗಳನ್ನು ಅರಿಯಬಹುದು. ಈ ಶಿಲ್ಪಗಳು ಕೇವಲ ಕಲಾತ್ಮಕ ಕೃತಿಗಳಲ್ಲ, ಸಮಾಜದ ಮನೋಭಾವ ಮತ್ತು ಸಂಸ್ಕೃತಿಯ ಪ್ರತಿಬಿಂಬಗಳಾಗಿವೆ.

ಕರ್ನಾಟಕದ ಇತರೆ ಹಾವೇರಿ, ಚಿತ್ರದುರ್ಗ, ಮೈಸೂರು, ದಾವಣಗೆರೆ, ಇಲ್ಲಿ ಕಂಡುಬರುವ ಪೆಣ್ಬುಯಿಲ್ ಶಿಲ್ಪಗಳಲ್ಲಿ ನಗ್ನ ಮಹಿಳೆಯ ಚಿತ್ರಣ, ಅತ್ಯಾಚಾರದ ನೇರ ದೃಶ್ಯ, ಭೀಕರ ದೃಶ್ಯಾವಳಿ, ಆದರೆ ಕೋಲಾರದಲ್ಲಿ ಶಿಲ್ಪಗಳಲ್ಲಿ ಸೌಮ್ಯತೆ, ಮಹಿಳೆಯ ಗೌರವ ಕಾಪಾಡುವ ಪ್ರಯತ್ನವಾಗಿದೆ. ಈ ಶಿಲ್ಪಗಳು ಸಮಾಜದ ದ್ವಂದ್ವ ಸ್ವಭಾವವನ್ನು ತೋರಿಸುತ್ತವೆ. ಮಹಿಳೆಯನ್ನು ದೇವಿಯಾಗಿ ಪೂಜಿಸುವುದು, ಅದೇ ಸಮಯದಲ್ಲಿ ಯುದ್ಧದಲ್ಲಿ ಅವಮಾನಿಸುವುದು, ವೀರನನ್ನು ಮಹಿಮೆಗೊಳಿಸಲಾಗುತ್ತದೆ. ಆದರೆ ಪೀಡಿತ ಮಹಿಳೆಯ ನೋವು ಮೌನವಾಗಿಯೇ ಉಳಿಯುತ್ತದೆ. ಪೆಣ್ಬುಯಿಲ್ ಘಟನೆಗಳಲ್ಲಿ ವೀರನ ಕುಟುಂಬಕ್ಕೆ ದಾನ, ಮಹಿಳೆಗೆ ಯಾವುದೇ ದಾಖಲೆ ಇಲ್ಲ, ಇದು ಸಮಾಜದ ಸ್ಮೃತಿ ರಾಜಕೀಯವನ್ನು ತೋರಿಸುತ್ತದೆ.

ಕೋಲಾರ ಪ್ರದೇಶದಲ್ಲಿ ಮಹಿಳಾ ದೇವತೆಗಳ ಆರಾಧನೆ ಹೆಚ್ಚಾಗಿದೆ. ಸತ್ಯಮ್ಮ, ಮಾರಮ್ಮ, ಯಲ್ಲಮ್ಮ, ದ್ರೌಪದಮ್ಮ ಇವುಗಳು ಮಹಿಳೆಯ ಗೌರವವನ್ನು ಸೂಚಿಸುತ್ತವೆ. ಈ ಕಾರಣದಿಂದ ಶಿಲ್ಪಗಳಲ್ಲಿ ನಗ್ನತೆಯನ್ನು ತೋರಿಸದೇ ಇರಬಹುದು. ಈ ಅಧ್ಯಯನ ಇಂದಿನ ಸಮಾಜಕ್ಕೂ ಪ್ರಸ್ತುತ ಮಹಿಳೆಯರ

ಮೇಲಿನ ಹಿಂಸಾಚಾರ ಇನ್ನೂ ಇದೆ. ಇತಿಹಾಸದಿಂದ ಪಾಠ ಕಲಿಯುವ ಅಗತ್ಯವಿದೆ. ಸಾಮಾಜಿಕ ನ್ಯಾಯ ಮತ್ತು ಸಮಾನತೆ ಅಗತ್ಯವಾಗಿದೆ. ಪೆಣ್ಬುಯಿಲ್ ಶಿಲ್ಪಗಳನ್ನು ಇತಿಹಾಸದ ದಾಖಲೆ, ಸಾಮಾಜಿಕ ಸ್ಥಿತಿಯ ಪ್ರತಿಬಿಂಬದಂತಹ ದೃಷ್ಟಿಕೋನಗಳಿಂದ ನೋಡಬಹುದು.

**ಉಪಸಂಹಾರ:** ಕೋಲಾರ ಜಿಲ್ಲೆಯ ಪೆಣ್ಬುಯಿಲ್ ಶಿಲ್ಪಗಳು ಕೇವಲ ಸ್ಮಾರಕಗಳಲ್ಲ; ಅವುಗಳು ಸಮಾಜದ ಮನೋಭಾವ, ಸಂಸ್ಕೃತಿ ಮತ್ತು ಇತಿಹಾಸದ ಪ್ರತಿಬಿಂಬಗಳಾಗಿವೆ. ಇವುಗಳು ಯುದ್ಧದ ಕ್ರೂರತೆಯನ್ನು ತೋರಿಸುತ್ತವೆ. ಮಹಿಳೆಯರ ಸ್ಥಿತಿಯನ್ನು ಬೆಳಗಿಸುತ್ತವೆ. ಸಮಾಜದ ಮೌಲ್ಯಗಳನ್ನು ಪ್ರಶ್ನಿಸುತ್ತವೆ. ಹೀಗಾಗಿ, ಈ ಶಿಲ್ಪಗಳ ಅಧ್ಯಯನವು ಪ್ರಾದೇಶಿಕ ಇತಿಹಾಸ ಮತ್ತು ಸಾಮಾಜಿಕ ಅಧ್ಯಯನಕ್ಕೆ ಮಹತ್ವದ ಕೊಡುಗೆ ನೀಡುತ್ತದೆ.

## ಛಾಯಾಚಿತ್ರಗಳು


**ದೊಡ್ಡಶಿವಾರ–ಪೆಣ್ಬುಯಿಲ್ ಶಿಲ್ಪ**


**ತಾವರೆಕೆರೆ– ಪೆಣ್ಬುಯಿಲ್ ಶಿಲ್ಪ**


**ತಾವರೆಕೆರೆ– ಪೆಣ್ಬುಯಿಲ್ ಶಿಲ್ಪ**


**ಬಲ್ಲ–ಪೆಣ್ಬುಯಿಲ್ ಶಿಲ್ಪ**

## ಗ್ರಂಥಸೂಚಿ


1. ಪರಮಶಿವಮೂರ್ತಿ.ಡಿ.ವಿ, ಪೆಣ್ಬುಯಿಲ್, ಹಂಪಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, 2010
2. ಚಿದಾನಂದಮೂರ್ತಿ.ಎಂ, ವೀರಗಲ್ಲುಗಳು ಮತ್ತು ಮಾಸ್ತಿಕಲ್ಲುಗಳು, ಬೆಂಗಳೂರು, ಐ.ಬಿ.ಎಚ್, ಪ್ರಕಾಶನ, 1984
3. ಚಿದಾನಂದಮೂರ್ತಿ.ಎಂ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಬೆಂಗಳೂರು, ಸಪ್ನ ಬುಕ್ ಹೌಸ್, 2008
4. ಕಲಬುರ್ಗಿ.ಎಂ.ಎಂ, ಸಮಾಧಿ–ಬಲಿದಾನ–ವೀರಮರಣ ಸ್ಮಾರಕಗಳು. ಬೆಂಗಳೂರು, ಐ.ಬಿ.ಎಚ್, ಪ್ರಕಾಶನ, 1980, 2011
5. ಹಂಪನಾ, (ಸಂ) ಸಾಹಭೀಮ ವಿಜಯಂ, ಹಂಪಿ, ಕನ್ನಡ ವಿಶ್ವವಿದ್ಯಾಲಯ, 2006
6. ಮಲ್ಲಿನಾಥ ಪುರಾಣ, ಹಂಪಿ, ಕನ್ನಡ ವಿಶ್ವವಿದ್ಯಾಲಯ, 1974
7. ಚಂದ್ರಪ್ರಭ ಚರಿತ್ರೆ. ಮೈಸೂರು, ಚಂದ್ರಿಕಾ ವಿಹಾರ, 1985
8. ಗೀತಾಚಾರ್ಯ.ನಾ, ಪೆಣ್ಣುಯ್ಯಲ್ ಒಂದು ವಿಶ್ಲೇಷಣೆ," ಇದು ಸಾಧನೆ, ಸಂಚಿಕೆ–09
9. "ಅಬ್ಬಲೂರು ಶಾಸನ" ಎಪಿಗ್ರಾಫಿಯಾ ಇಂಡಿಕಾ, ಸಂಚಿಕೆ–26, ಕ್ರಿ.ಶ. 1219, ಬಾದಾಮಿ ಶಾಸನ, ಬಾದಾಮಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ
10. ಪ್ರಕಾಶ.ಕೆ.ಎಂ, ನಂಜನಗೂಡು ಮತ್ತು ಹೆಗ್ಗಡದೇವನಕೋಟೆ ತಾಲ್ಲೂಕುಗಳ ವೀರಗಲ್ಲುಗಳು ಮತ್ತು ಮಾಸ್ತಿಗಲ್ಲುಗಳು – ಒಂದು ಅಧ್ಯಯನ, ಅಪ್ರಕಟಿತ ಮಹಾಪ್ರಬಂಧ, 2017
11. ಹೊನ್ನೂರುಸ್ವಾಮಿ.ಹೆಚ್, ದಾವಣಗೆರೆ ಜಿಲ್ಲೆಯ ಸ್ಮಾರಕ ಶಿಲ್ಪಗಳು, ಅಪ್ರಕಟಿತ ಪಿಹೆಚ್.ಡಿ ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2019